
# ಭಾವಪರಿವರ್ತನೆ



❋ **ಭಕ್ತ:** ಕಾಮಕ್ರೋಧಾದಿ ಅರಿಷಡ್ವರ್ಗಗಳು ನಮ್ಮಲ್ಲಿ ತುಂಬಿವೆ. ಏನು ಮಾಡೋಣ ನಾವು?

**ಶ್ರೀರಾಮಕೃಷ್ಣರು:** ಆ ಅರಿಷಡ್ವರ್ಗಗಳನ್ನು ಭಗವಂತನ ಕಡೆಗೆ ತಿರುಗಿಸಿಬಿಡು. ಆತ್ಮನೊಡನೆ ವಿಲಾಸಿಸಬೇಕೆಂದು ಕಾಮನೆ ಮಾಡಬೇಕು. ಯಾರು ಭಗವಂತನ ಮಾರ್ಗಕ್ಕೆ ತಡೆ ಒಡ್ಡುತ್ತಾರೋ ಅವರ ಮೇಲೆ ಕೋಪಿಸಿಕೊಳ್ಳಬೇಕು. ಆತನ ಸಾಕ್ಷಾತ್ಕಾರಕ್ಕಾಗಿ ಲೋಭಪಡಬೇಕು. 'ನಾನು, ನನ್ನದು' ಎಂಬುದನ್ನು ಬಿಡಲಾಗದಿದ್ದರೆ ಭಗವಂತನ ಸಂಬಂಧವಾಗಿ ಮಾತ್ರವೇ ಹಾಗೆ ಮಾಡಬೇಕು. ಅಹಂಕಾರ ಪಡಬೇಕಾಗಿದ್ದರೆ ವಿಭೀಷಣನ ಹಾಗೆ ವರ್ತಿಸಬೇಕು. ಆತ ಹೇಳಿದ, 'ನಾನು ಶ್ರೀರಾಮನಿಗೆ ಸಾಷ್ಟಾಂಗ ಪ್ರಣಾಮ ಮಾಡಿದ್ದೇನೆ. ಈ ತಲೆಯಿಂದ ನಾನು ಬೇರೆ ಯಾರ ಪಾದವನ್ನೂ ಸ್ಪರ್ಶಮಾಡುವುದಿಲ್ಲ.'

❋ ಭಕ್ತಿಶಾಸ್ತ್ರಗಳು ಈ ಜಗತ್ತನ್ನು ಆನಂದಭವನ ಎಂಬುದಾಗಿ ವರ್ಣಿಸಿವೆ. ರಾಮಪ್ರಸಾದ ತನ್ನ ಹಾಡೊಂದರಲ್ಲಿ ಹೇಳಿದ್ದಾನೆ: 'ಈ ಜಗತ್ತು ಮಾಯೆಯ ಚೌಕಟ್ಟಿನ ಮನೆ!' ಎಂದು. ಇನ್ನೊಬ್ಬ ಅದಕ್ಕೆ ಹೇಳಿದ್ದಾನೆ: 'ಈ ಜಗತ್ತೇ ಆನಂದಭವನ!' ಅಂತ. ಒಂದು ಹೇಳಿಕೆ ಇದೆ: 'ಕಾಳಿಯ ಭಕ್ತ ಜೀವನ್ಮುಕ್ತ, ನಿತ್ಯಾನಂದಮಯ!' ಎಂಬುದಾಗಿ. ಭಕ್ತನ ದೃಷ್ಟಿಯಿಂದ ಯಾರು ಭಗವಂತನೋ, ಆತನೇ ಮಾಯೆಯಾಗಿದ್ದಾನೆ. ಆತನೇ ಈ ಜೀವ, ಜಗತ್ತಾಗಿದ್ದಾನೆ. ಭಕ್ತನ ದೃಷ್ಟಿಗೆ ಭಗವಂತ, ಮಾಯೆ, ಜೀವ, ಜಗತ್ತು, ಎಲ್ಲವೂ ಒಂದೇ. ಕೆಲವು ಮಂದಿ ಭಕ್ತರ ಕಣ್ಣಿಗೆ ಎಲ್ಲವೂ ರಾಮಮಯ; ಎಲ್ಲವೂ ರಾಮನೇ ಆಗಿದ್ದಾನೆ. ಇನ್ನು ಕೆಲವು ಮಂದಿಗೆ ಎಲ್ಲವೂ ರಾಧಾಕೃಷ್ಣಮಯವಾಗಿ ಕಾಣುತ್ತದೆ. ಅವರ ದೃಷ್ಟಿಯಿಂದ ಶ್ರೀಕೃಷ್ಣನೇ ಚತುರ್ವಿಂಶತಿ ತತ್ತ್ವ ಆಗಿದ್ದಾನೆ. ಇದು ಹಸುರು ಕನ್ನಡಕ ಹಾಕಿಕೊಂಡರೆ ಎಲ್ಲವೂ ಹಸುರಾಗಿ ಕಾಣುವ ಹಾಗೆ.

❋ ಶ್ರದ್ಧೆ! ಶ್ರದ್ಧೆ! ಒಮ್ಮೆ ಒಬ್ಬ ಗುರು ತನ್ನ ಶಿಷ್ಯನಿಗೆ ಹೇಳಿದ: 'ರಾಮನೇ ಎಲ್ಲವೂ ಆಗಿದ್ದಾನೆ' ಎಂಬುದಾಗಿ. ಒಂದು ನಾಯಿ ರೊಟ್ಟಿಯನ್ನು ತಿಂದುಬಿಡುವುದರಲ್ಲಿದ್ದಾಗ, ಅದಕ್ಕೆ ಆ ಶಿಷ್ಯ ಹೇಳಿದ: 'ಓ ರಾಮ, ಸ್ವಲ್ಪ ತಾಳು, ಸ್ವಲ್ಪ ತಾಳು. ರೊಟ್ಟಿಗೆ ತುಪ್ಪ ಸವರಿ ಕೊಡುತ್ತೇನೆ.' ಗುರು ವಾಕ್ಯದಲ್ಲಿ ಆತನಿಗೆ ಈ ಮಟ್ಟದ ಶ್ರದ್ಧೆ.

❋ 'ನೀನು ನಿನ್ನದು' ಎಂಬ ಭಾವನೆಯೇ ಜ್ಞಾನ; 'ನಾನು, ನನ್ನದು' ಎಂಬುದೇ ಅಜ್ಞಾನ. ಜ್ಞಾನ ಈ ಭಾವನೆಯನ್ನು ತರುತ್ತದೆ: 'ಹೇ ಭಗವಂತ, ನೀನೇ ಕರ್ತ, ನಾನು ಅಕರ್ತ. ಹೇ ಭಗವಂತ, ಎಲ್ಲವೂ ನಿನಗೆ ಸೇರಿದವೆ. ದೇಹ, ಮನಸ್ಸು, ಗೃಹ, ಪರಿವಾರ, ಜೀವ, ಜಗತ್ತು ಎಲ್ಲವೂ ನಿನಗೆ ಸೇರಿದವೆ. ಯಾವುದೂ ನನಗೆ ಸೇರಿದುದಲ್ಲ.'

❋ ಅಜ್ಞಾನಿ ಹೇಳುತ್ತಾನೆ: 'ಏನು, ಭಗವಂತನೆ? ಅಲ್ಲಿ , ಅಲ್ಲಿ–ಬಹಳ ದೂರದಲ್ಲಿ.' ಜ್ಞಾನಿಗೆ ಗೊತ್ತಿದೆ. ಭಗವಂತ ಇಲ್ಲೆ , ಬಹಳ ಹತ್ತಿರದಲ್ಲೆ , ಹೃದಯಮಧ್ಯದಲ್ಲೆ ಅಂತರ್ಯಾಮಿ ರೂಪದಿಂದ ಇದ್ದಾನೆ; ಪ್ರತಿಯೊಂದು ರೂಪವನ್ನೂ ಆತನೇ ಧರಿಸಿದ್ದಾನೆ ಎಂಬುದಾಗಿ.

❋ ಒಮ್ಮೆ ನಾನು ಒಂದು ಕಥೆ ಕೇಳಿದೆ. ಒಮ್ಮೆ ಒಬ್ಬನಿಗೆ ಭಗವಂತನಿಂದ ಆದೇಶ ದೊರೆಯಿತಂತೆ, ಆತ ಟಗರಿನಲ್ಲಿ ತನ್ನ ಇಷ್ಟದೇವರನ್ನು ನೋಡಬೇಕು ಎಂಬುದಾಗಿ. ಆತ ಅದನ್ನು ಒಡನೆಯೇ ನಂಬಿದನಂತೆ. ಸರ್ವಭೂತಗಳಲ್ಲೂ ಭಗವಂತನೇ ಇದ್ದಾನೆ.

❋ 'ಅಹಂ' ಎಂಬುದು ಹೋಗತಕ್ಕುದಲ್ಲ. 'ನಾನು ದೇಹ' ಎಂಬ ಜ್ಞಾನವಿರುವವರೆಗೆ, ಜೀವಜಗತ್ತು ಇದ್ದೇ ಇರುತ್ತದೆ. ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡರೆ ಕಂಡುಬರುತ್ತದೆ, ಆತನೇ ಜೀವಜಗತ್ತು ಆಗಿರುವುದಾಗಿ. ಕೇವಲ ವಿಚಾರದಿಂದ ಈ ಅನುಭವವನ್ನು ಪಡೆಯಲಾಗುವುದಿಲ್ಲ.

❋ ನೀನು ಆತ್ಮಸಾಕ್ಷಾತ್ಕಾರದ ವಿಷಯವಾಗಿ ಕೇಳಿದೆಯಲ್ಲ, ಅದಕ್ಕೆ ಉಪಾಯ, ವ್ಯಾಕುಲತೆ. ಮನೋವಾಕ್ಕಾಯವಾಗಿ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಬೇಕು. ಪಿತ್ತ ಅಧಿಕವಾದಾಗ ಕಾಮಾಲೆ ರೋಗ ಬರುತ್ತದೆ. ಆಗ ಎಲ್ಲವೂ ಹಳದಿಯಾಗಿ ಕಾಣುತ್ತವೆ. ಹಳದಿ ಬಣ್ಣ ಬಿಟ್ಟು ಬೇರಾವ ಬಣ್ಣವನ್ನೂ ನೋಡಲಾಗುವುದಿಲ್ಲ. ನಿಮ್ಮೊಳಗೆ ಯಾರು ಕೇವಲ ಹೆಂಗಸಿನ ಪಾರ್ಟನ್ನೇ ತೆಗೆದುಕೊಳ್ಳುತ್ತಾರೊ ಅವರಿಗೆ ಪ್ರಕೃತಿಯ ಭಾವ ಬಂದುಬಿಡುತ್ತದೆ; ಹೆಂಗಸಿನ ಸಂಬಂಧವಾಗಿ ಚಿಂತಿಸಿ ಹೆಂಗಸಿನ ಹಾವಭಾವಗಳೆಲ್ಲಾ ಬಂದುಬಿಡುತ್ತವೆ. ಅದೇ ರೀತಿ ಭಗವಂತನ ಸಂಬಂಧವಾಗಿ ಹಗಲಿರುಳು ಚಿಂತಿಸುತ್ತಿದ್ದರೆ ಆತನ ಸತ್ತ್ವವೇ ನಮಗೆ ಬಂದುಬಿಡುತ್ತದೆ.

❋ ಮನಸ್ಸೆಂಬುದು ಅಗಸನ ಮನೆಯ ಬಟ್ಟೆಯ ಹಾಗೆ. ಅದನ್ನು ಯಾವ ಬಣ್ಣದಲ್ಲಿ ಅದ್ದುತ್ತೇವೆಯೋ, ಅದಕ್ಕೆ ಆ ಬಣ್ಣ ಬಂದುಬಿಡುತ್ತದೆ.

**ಶ್ರೀರಾಮಕೃಷ್ಣ ವಚನವೇದದಿಂದ**